# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2104**

ಸದಸ್ಯರ ಹೆಸರು : **ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)**

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : **25-03-2026**

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ವಾಹನಗಳ ಮಾಲಿನ್ಯ ತಪಾಸಣೆ ನಡೆಸಿ ನೀಡುವ ಪ್ರಮಾಣಪತ್ರಕ್ಕೆ ಬಳಸುವ 'ಹೋಲೋಗ್ರಾಂ (Hologram)' ಸ್ಟಿಕ್ಕರ್ ತೀವ್ರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ವಾಹನಗಳ ತಪಾಸಣೆ ನಡೆಸಿದ ಬಳಿಕ ನೀಡುವ ಪ್ರಮಾಣಪತ್ರಗಳಿಗೆ ಅಂಟಿಸಲು ಹೋಲೋಗ್ರಾಂ ಕೊರತೆ ಕಂಡು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸರ್ಕಾರದ ಆದೇಶ ಸಂಖ್ಯೆ. ಟಿಡಿ 242 ಟಿಡಿಓ 2020 (ಭಾಗ-1), ದಿನಾಂಕ:29-12-2025 ರನ್ವಯ ಭದ್ರತಾ ವೈಶಿಷ್ಟ್ಯವುಳ್ಳ 50.00 ಲಕ್ಷ ಹೋಲೋಗ್ರಾಂ ಸ್ಟಿಕ್ಕರ್ ಗಳನ್ನು ಮುದ್ರಿಸಿ ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನಿಯಮಾನುಸಾರ ಟೆಂಡರ್ ಕರೆದು ಯಶಸ್ವಿ ಬಿಡ್ಡುದಾರರನ್ನು ಆಯ್ಕೆ ಮಾಡಿ ದಿನಾಂಕ:06-02-2026 ರಂದು ಕಾರ್ಯಾದೇಶ ನೀಡಲಾಗಿದೆ.<br><br>ಟೆಂಡರಿನಲ್ಲಿ ಆಯ್ಕೆಯಾದ ಯಶಸ್ವಿ ಬಿಡ್ಡುದಾರರು ಹಂತ-ಹಂತವಾಗಿ 20.00 ಲಕ್ಷ ಹೋಲೋಗ್ರಾಂ ಸ್ಟಿಕ್ಕರ್ ಗಳನ್ನು ಮುದ್ರಿಸಿ ಸರಬರಾಜು ಮಾಡಿದ್ದು, ಸದರಿ ಲಭ್ಯವಿರುವ ಹೋಲೋಗ್ರಾಂ ಸ್ಟಿಕ್ಕರ್ ಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪಿತವಾಗಿರುವ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳಿಗೆ ಹಂಚಿಕೆ ಮಾಡಲಾಗುತ್ತಿದ್ದು, ಹೋಲೋಗ್ರಾಂ ಸ್ಟಿಕ್ಕರ್‌ಗಳ ಕೊರತೆಯನ್ನು ನಿವಾರಿಸಲಾಗಿರುತ್ತದೆ. |
| ಆ) | ಹೋಲೋಗ್ರಾಂ ಇಲ್ಲದ ಪ್ರಮಾಣಪತ್ರಗಳನ್ನು ಗ್ರಾಹಕರು ಮತ್ತು ಅಧಿಕಾರಿಗಳು ಅಧಿಕೃತ ಎಂದು ಒಪ್ಪದ ಕಾರಣ ವಾಹನ ಮಾಲೀಕರು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮವೇನು; | ಸಾರಿಗೆ ಇಲಾಖೆಯಿಂದ ನೀಡಲಾಗುತ್ತಿರುವ ಹೋಲೋಗ್ರಾಂ ಸ್ಟಿಕ್ಕರ್‌ಗಳನ್ನು ವಾಯುಮಾಲಿನ್ಯ ತಪಾಸಣಾ ಕೇಂದ್ರಗಳಲ್ಲಿ ಶೇಖರಿಸಿಟ್ಟುಕೊಂಡು ಹೋಲೋಗ್ರಾಂ ಸ್ಟಿಕ್ಕರ್ ಗಳನ್ನು ಅಂಟಿಸದೆ ಪ್ರಮಾಣಪತ್ರಗಳನ್ನು ನೀಡುತ್ತಿರುವುದು ಕಂಡು ಬಂದಿರುವುದಿಲ್ಲ ಮತ್ತು ಹೋಲೋಗ್ರಾಂ ಸ್ಟಿಕ್ಕರ್ ಗಳ ಖರೀದಿ ಸಂಬಂಧ ಟೆಂಡರ್ ಕರೆದು ಖರೀದಿಸಿ ರಾಜ್ಯದ ವಿವಿಧ ಭಾಗಗಳಲ್ಲಿನ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳಿಗೆ ಹಂಚಿಕೆ ಮಾಡಲಾಗಿದ್ದು, ಹೋಲೋಗ್ರಾಂ ಸ್ಟಿಕ್ಕರ್ ಗಳ ಕೊರತೆಯನ್ನು ನಿವಾರಿಸಲಾಗಿರುತ್ತದೆ. |
| ಇ) | ಹೋಲೋಗ್ರಾಂ ಪೂರೈಕೆಗಾಗಿ ಕಳೆದ ಒಂದೂವರೆ ತಿಂಗಳಿನಿಂದ ಟೆಂಡರ್ ಪ್ರಕ್ರಿಯೆ ವಿಳಂಬವಾಗಲು ಕಾರಣವೇನು; ಇದರಿಂದಾಗಿ ಮಾಲಿನ್ಯ | ಸರ್ಕಾರದ ಆದೇಶ ಸಂಖ್ಯೆ. ಟಿಡಿ 242 ಟಿಡಿಓ 2020 (ಭಾಗ-1), ದಿನಾಂಕ:29-12-2025 ರನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನಿಯಮಾನುಸಾರ ಟೆಂಡರ್ ಕರೆದು ಭದ್ರತಾ |

| | ಪ್ರಶ್ನೆ | ಉತ್ತರ |
|---|---|---|
| | ತಪಾಸಣಾ ಕೇಂದ್ರಗಳ ಮಾಲೀಕರಿಗೆ ಆಗುತ್ತಿರುವ ಆರ್ಥಿಕ ನಷ್ಟಕ್ಕೆ ಜವಾಬ್ದಾರರು ಯಾರು; | ವೈಶಿಷ್ಟ್ಯವುಳ್ಳ 50.00 ಲಕ್ಷ ಹೋಲೋಗ್ರಾಂ ಸ್ಟಿಕ್ಕರ್ ಗಳನ್ನು ಮುದ್ರಿಸಿ ಸರಬರಾಜು ಮಾಡುವ ಸಂಬಂಧ RFP ದಾಖಲಾತಿಗಳನ್ನು ಸಿದ್ಧಪಡಿಸಿ ಅಂತಿಮಗೊಳಿಸುವ ಸಂಬಂಧ ಸಮಿತಿಯನ್ನು ರಚಿಸಿ, ಸಮಿತಿಯು RFP ದಾಖಲಾತಿಗಳನ್ನು ಸಿದ್ಧಪಡಿಸಿ ಅಂತಿಮಗೊಳಿಸಿದ ನಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ದಿನಾಂಕ:19-01-2026 ರಂದು ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು .<br><br>ಟೆಂಡರ್ ವೇಳಾಪಟ್ಟಿಯನ್ವಯ ಪ್ರಿ-ಬಿಡ್ ಸಭೆಯನ್ನು ನಡೆಸಿ, ಸಭೆಯ ನಡವಳಿಯನ್ವಯ Addendum ನ್ನು ಟೆಂಡರಿನಲ್ಲಿ ಅಪ್ಲೋಡ್ ಮಾಡಿ, ಟೆಂಡರಿನಲ್ಲಿ ಬಿಡ್ಡುದಾರರು ಸಲ್ಲಿಸಿರುವ ಬಿಡ್ಡುಗಳನ್ನು ಮೌಲ್ಯಮಾಪನ ಮಾಡಿ, ಆರ್ಥಿಕ ಬಿಡ್ನನ್ನು ತೆರೆದು ಯಶಸ್ವಿ ಬಿಡ್ಡುದಾರರಿಗೆ ದಿನಾಂಕ:06-02-2026 ರಂದು ಕಾರ್ಯಾದೇಶ ನೀಡಲಾಗಿದೆ. ಸದರಿ ಟೆಂಡರ್ ಪ್ರಕ್ರಿಯೆಯನ್ನು ಕೆಟಿಪಿಪಿ ನಿಯಮಾನುಸಾರ ನಡೆಸಿದ್ದು, ಯಾವುದೇ ವಿಳಂಬವಾಗಿರುವುದಿಲ್ಲ.<br><br>ಟೆಂಡರಿನಲ್ಲಿ ಆಯ್ಕೆಯಾದ ಯಶಸ್ವಿ ಬಿಡ್ಡುದಾರರು ಟೆಂಡರಿನ ಕರಾರಿನಂತೆ ಹಂತ-ಹಂತವಾಗಿ 20.00 ಲಕ್ಷ ಹೋಲೋಗ್ರಾಂ ಸ್ಟಿಕ್ಕರ್ ಗಳನ್ನು ಮುದ್ರಿಸಿ ಸರಬರಾಜು ಮಾಡಿದ್ದು, ಸದರಿ 20.00 ಲಕ್ಷ ಹೋಲೋಗ್ರಾಂ ಸ್ಟಿಕ್ಕರ್ ಗಳ ಪೈಕಿ ದಿನಾಂಕ:16-03-2026ರ ಅಂತ್ಯಕ್ಕೆ 7,83,960 ಲಕ್ಷ ಹೋಲೋಗ್ರಾಂಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪಿತವಾಗಿರುವ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳಿಗೆ ಹಂಚಿಕೆ ಮಾಡಲಾಗಿದ್ದು, ಪ್ರಸ್ತುತ ಹೋಲೋಗ್ರಾಂ ಸ್ಟಿಕ್ಕರ್ ಗಳ ಕೊರತೆ ಇರುವುದಿಲ್ಲ. |
| ಈ) | ಹೊಸದಾಗಿ ರೂ.36.00 ಲಕ್ಷ ವೆಚ್ಚದಲ್ಲಿ ಹೋಲೋಗ್ರಾಂ ಪೂರೈಸಲು ಕರೆಯಲಾದ ಟೆಂಡರ್ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ ಮತ್ತು ಯಾವಾಗ ಪೂರ್ಣ ಪ್ರಮಾಣದಲ್ಲಿ ಸ್ಟಿಕ್ಕರ್ ಗಳು ಲಭ್ಯವಾಗಲಿವೆ? | |

**ಟಿರಿ 37 ಟಿರಿಕೊ, 2026**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.